# ದನಗಳ ಪರಿಷೆಗೆ ಆಧುನಿಕತೆಯ ಗ್ರಹಣ?

**ಗ್ರಾಮೀಣ ಬದುಕಿನ ಭಾಗವೇ ಆಗಿದ್ದ ದನಗಳ ಜಾತ್ರೆಗಳು ಕಳೆಗುಂದುತ್ತಿವೆ. ಆ ಜಾತ್ರೆಗಳಲ್ಲಿ ಕಂಡುಬರುತ್ತಿದ್ದ ರೈತರ ಜೀವನ ಚಿತ್ರಗಳು, ವ್ಯಾಪಾರ ವಹಿವಾಟು, ಸ್ವಾರಸ್ಯಕರ ಪ್ರಸಂಗಗಳೂ ಕಣ್ಮರೆಯಾಗುತ್ತಿವೆ.**



**■ ಮಂಜುನಾಥ್ ಅಮಲಗೊಂದಿ**

ಬಯಲುಸೀಮೆಯ ರೈತರಿಗೆ ದನಗಳ ಜಾತ್ರೆ ಎಂದರೆ ಹಬ್ಬ. ಪ್ರತಿ ವರ್ಷ ಜಾತ್ರೆಗೆ ಹೊರಡುವ ಎರಡು ವಾರ ಮೊದಲೇ ಗೊಂತಿನ ಗಳಗಳನ್ನು ಮಾಡಲು ನೀಲಗಿರಿ ಕಡ್ಡಿಗಳನ್ನು ಕಡಿದುಕೊಂಡು ಬರುವುದು, ಕಡ್ಡಿಗಳ ಚರ್ಮ ತೆಗೆದು ಗಂಟುಗಳನ್ನು ಕತ್ತರಿಸಿ ನೀಟ್ ಮಾಡುವುದು, ಜಾತ್ರೆ ನಡೆಯುವ ಸ್ಥಳಕ್ಕೆ ಹೋಗಿ ಜಾಗ ಗುರುತು ಮಾಡಿ ಗೊಂತು ಹಾಕಿ ಬರುವುದು, ಕಡಲೆಕಾಯಿಬಳ್ಳಿ ಒಣಗಿಸಿ ಬಡಿದು ಪುಡಿ ಮಾಡಿ ಚೀಲಕ್ಕೆ ತುಂಬುವುದು, ಹುಲ್ಲಿನ ಹೊರೆ ಕಟ್ಟುವುದು, ಅಡುಗೆ ಮಾಡಲು ಸಾಮಗ್ರಿಗಳನ್ನು ಚೀಲಕ್ಕೆ ಹಾಕಿಡುವುದು, ದನಗಳಿಗೆ ಪ್ರತಿ ಮೂರು ದಿನಕ್ಕೊಮ್ಮೆ ಮೈ ತೊಳೆಯುವುದು... ಹೀಗೆ ತಯಾರಿ ಬಲು ಜೋರಾಗಿರುತ್ತಿತ್ತು.

ನಾವು ಚಿಕ್ಕವರಿದ್ದಾಗ, ಜಾತ್ರೆಗೆ ಹೋಗುವಾಗ ಮರದ ಗಾಡಿಗೆ ಹುಲ್ಲು, ಗಳ ಮತ್ತು ಬತ್ತೆ ತುಂಬಿಕೊಂಡು ಹೋಗುತ್ತಿದ್ದರು. ಬೇಸಿಗೆ ಸಮಯದಲ್ಲಿ ಮರದ ಗಾಡಿಯ ಚಕ್ರ ಬಿಸಿಲಿಗೆ ಅಳಿ ಬಿಡುತ್ತಿದ್ದವು. ಹಾಗಾಗಿ ಜಾತ್ರೆ ಬರುವ ಮೊದಲೇ ಹೊಟ್ಟೆಮರ, ಪಾರಿ ಎಲ್ಲವನ್ನೂ ಶಾಮಿಲ್‌ನಿಂದ ತಂದು ಚಕ್ರ ರಿಪೇರಿ ಮಾಡುವುದರ ಜೊತೆಗೆ ಅಳಿಯನ್ನು (ಮರದ ಹಲಗೆಗಳಿಗೆ ಕಬ್ಬಿಣದ ರಿಂಗ್ ಜೋಡಿಸಿ ಬೆಸುಗೆ ಹಾಕುವುದು. ನಿಗಿನಿಗಿ ಕೆಂಡದಲ್ಲಿ ರಿಂಗ್ ಕಾಯಿಸಿ ಚಕ್ರವನ್ನು ಬೆಸೆಯಲಾಗುತ್ತದೆ) ಬಿಡಿಸಿ ಜಾತ್ರೆಗೆ ಸಿದ್ಧರಾಗುತ್ತಿದ್ದರು. ಆಗ ನಮ್ಮ ಕೆಲಸ ಸಗಣಿ ಕುಳ್ಳೀ, ತೆಂಗಿನಕಾಯಿ ಬುಲ್ಡೆ ಆಯ್ದುಕೊಂಡು ಬಂದು ಚೀಲ ಮಾಡಬೇಕಾಗಿತ್ತು.

ಆ ವರ್ಷ ನಮ್ಮ ಮನೆಯಲ್ಲಿ ಎರಡು ಹಸುಗಳು ಕರು ಹಾಕಿದ್ದವು. ಅದರಲ್ಲಿ ಮೊದಲನೆಯದು ಹೋರಿ ಕರು ಹಾಕಿತ್ತು. ಆ ಕರುವನ್ನು ಮಾರದೇ ಕೆಲವು ತಿಂಗಳ ನಂತರ ಹಸುಗಳನ್ನು ಮತ್ತು ಇನ್ನೊಂದು ಕರುವನ್ನು ಮಾರಿದರು. ನಮ್ಮಲ್ಲೇ ಉಳಿಸಿಕೊಂಡಿದ್ದ ಹೋರಿ ಕರುವಿಗೆ ಜೋಡಿ ಮಾಡಿ ಜಾತ್ರೆಯಲ್ಲಿ ಮಾರುವುದು ಅಪ್ಪನ ಯೋಜನೆ. ಅದರಂತೆ ಸ್ನೇಹಿತರೊಂದಿಗೆ ಮಾದೇಶ್ವರ ಸಂತೆಗೆ ಹೋಗಿ ಲಾಯಕ್ ಹೋರಿಕರ ತಂದೇಬಿಟ್ಟರು. ಇನ್ನೇನು ಒಳ್ಳೆ ಜೋಡಿ ಕಲೆ ಹಾಕಿದ್ದೇವೆ ಎನ್ನುವಷ್ಟರಲ್ಲಿ, ಅವುಗಳ ಸೌಂದರ್ಯ ಕಳೆಗಟ್ಟುತ್ತಿಲ್ಲ ಎಂಬ ಚಿಂತೆ ಅವರದು. ಆಗ ಪ್ರಾರಂಭವಾಯಿತು ದನಗಳ ಬ್ಯೂಟಿ ಪಾರ್ಲರ್.

ಸೊಟ್ಟ ಕೊಂಬನ್ನು ನೆಟ್ಟಗೆ ಮಾಡುವುದೇ ಬ್ಯೂಟಿ ಪಾರ್ಲರ್ ಮೊದಲನೇ ಕಾಯಕ. ಹೋರಿಕರು ತಂದು ವಾರದ ನಂತರ ನಮ್ಮಣ್ಣನಿಗೆ ನಮ್ಮಪ್ಪ ಫೋನಾಯಿಸಿ ‘ಏ ರಾಮು, ನಿಮ್ಮೂರಲ್ಲಿ ಕೊಂಬು ಮುರಿಯುವ ಆಯಪ್ಪ ಇದಾನಲ್ಲ ಅವನಿಗೆ ನಮ್ಮನೆ ಹತ್ರ ಬರೋಕೆ ಹೇಳು’ ಅಂತ ಹೇಳಿದರು. ಎರಡು ದಿನಗಳ ನಂತರ ಅವರು ಮನೆ ಹತ್ತಿರ ಬಂದು ಎರಡು ಹೋರಿಕರುಗಳ ಕೊಂಬುಗಳನ್ನು ಮುರಿದು ನೇರ ಮಾಡಿ, ಕೊಂಬುಗಳ ಮಧ್ಯೆ ಒಂದು ಮರದ ಸೆಕ್ಕೆ ಹೊಡೆದು ಗೋಣಿದಾರದಿಂದ ಬಿಗಿದು ಕಟ್ಟಿದರು. ಈಗ ನಮ್ಮ ಹೋರಿಕರುಗಳ ಬ್ಯೂಟಿ ಒಂದು ಹಂತಕ್ಕೆ ಬಂತು.

ಹಸುಗಳ ಮಾರಿದ ನಂತರ ಮನೆಗೆ ಹಾಲಿನ ಬಳಕೆಗಾಗಿ ಒಂದು ಜೊತೆ ಹಸುಗಳನ್ನು ಸಹ ತಂದರು. ಅವುಗಳನ್ನು ನೋಡಿದರೆ ಮೂರ್ತಾಕೆ ಬೀಳ್ತಾವೆಂದು ಕೆಲವರು ಗೇಲಿ ಮಾಡಿದ್ದುಂಟು. ಸರಿಯಾದ ಮೇವು, ನಿಗಾ ಇಲ್ಲದೆ ಅವು ಆ ಸ್ಥಿತಿಗೆ ಬರಲು ಕಾರಣವಾಗಿತ್ತು. ಹಸು ತರಲು ಹಣ ಕಡಿಮೆಯಿದ್ದ ಕಾರಣಕ್ಕೆ ಕಡಿಮೆ ಬೆಲೆಯೆಂದು ಆ ಹಸುಗಳನ್ನು ತೆಗೆದುಕೊಂಡು ಬಂದಿದ್ದರು. ಅದರಲ್ಲಿ ಒಂದು ಹಸು ಕರು ಹಾಕಿ ವಾರ ಮಾತ್ರವಾಗಿತ್ತು. ಇನ್ನೊಂದು ಬರಡಾಗಿದ್ದ ಹಸು. ಈ ಒಂದು ಜೊತೆ ಹಸುಗಳಲ್ಲಿ ಹಾಲು ಕರೆಯುವುದನ್ನು ಉಳಿಸಿಕೊಂಡು ಬಡಕಲು ಹಸುವನ್ನು ಜಾತ್ರೆಯಲ್ಲಿ ಮಾರುವುದು ನಮ್ಮಪ್ಪನ ಪ್ಲಾನು.



ಖರೀದಿಗೆ ಮುನ್ನ ಪರೀಕ್ಷೆ

ಬಡಕಲು ಹಸು ಮಾರುವುದು ಒಂದು ರೀತಿಯ ಚಾಲೆಂಜ್. ಮತ್ತೆ ಹಸುಗಳ ಬ್ಯೂಟಿ ಪಾರ್ಲರ್ ಶುರು. ಹಸುವಿನ ಕೊಂಬು ಎರೆಯುವುದು, ಕೊಂಬುಗಳಿಗೆ ಎಣ್ಣೆ ಹಚ್ಚುವುದು, ಬಾಲದ ಕೂದಲು ಮಟ್ಟವಾಗಿ ಕತ್ತರಿಸುವುದು, ದಿನಕ್ಕೆ ಮೂರು ಬಾರಿ ನೀರು ಕುಡಿಸುವುದು, ಮೈ ತೊಳೆಯುವುದು, ವೆರೈಟಿ ಮೇವು ಹಾಕುವುದು...

ರಾಮನವಮಿ ಹಿಂದಿನ ದಿನ ಜಾತ್ರೆಗೆ ದನಗಳನ್ನು ಮತ್ತು ಹುಲ್ಲನ್ನು ತುಂಬಿಕೊಂಡು ಹೋಗಲು ಟೆಂಪೊ ಬಸಣ್ಣನಿಗೆ ಫೋನ್ ಮಾಡಿದರು. ನಮ್ಮಮ್ಮ ಜಾತ್ರೆಯಲ್ಲಿ ಮಾಡುವ ಅಡುಗೆಗೆ ಬೇಕಾದ ಸಾಮಗ್ರಿಗಳನ್ನು ತುಂಬಲು ಪ್ರಾರಂಭಿಸಿದರು. ರಾಮನವಮಿ ಹಿಂದಿನ ದಿನ ಬಸಣ್ಣನ ಟೆಂಪೊ ಬಂದು ಬಡಕಲು ಹಸು, ಹೋರಿಕರುಗಳನ್ನು ಮತ್ತು ಹುಲ್ಲನ್ನು ತುಂಬಿಕೊಂಡು ಜಾತ್ರೆಗೆ ಹೊರಟೇಬಿಟ್ಟರು.

ಎರಡು ದಿನಗಳ ನಂತರ ನನ್ನ ಮಗಳಿಗೆ ದನಗಳ ಜಾತ್ರೆ ತೋರಿಸಲು ನಾನೂ ಹೊರಟುನಿಂತೆ. ಬಡವನಹಳ್ಳಿ ಜಾತ್ರೆ ಬಲುಜೋರು. ಬಿರು ಬಿಸಿಲಿನಲ್ಲಿ ನಾನು, ನನ್ನ ಮಗಳು ಹಾಗೂ ಗೆಳೆಯ – ಮೂವರೂ ಜಾತ್ರೆ ಒಳಹೊಕ್ಕಿದೆವು. ನಮ್ಮಪ್ಪ,